ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ದಿಃ **12-02-2020**

**PW-1**

ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಎಮ್ ಕೆ ವಿ ಕೆ ವಕೀಲರ ಪರವಾಗಿ ಶ್ರೀ ಪಿ ಡಿ ಜೆ ವಕೀಲರಿಂದಃ

ವಾದಿಯ ಜಿಪಿಎ ಹಾಜರಿರುತ್ತೇನೆ. ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದನ್ನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯ ಮತ್ತು ಸರಿ ಇದ್ದು, ಅವುಗಳನ್ನು ಓದಿ ತಿಳಿದುಕೊಂಡು ಸರಿ ಇದೆ ಎಂದು ತಿಳಿದು ಸರಿ ಮಾಡಿರುತ್ತೇನೆ ಎಂದು ಪ್ರಮಾಣೀಕರಿಸಿರುತ್ತಾರೆ. ಪಿಡಬ್ಲ್ಯೂ-1 ಎಂದು ವಿಚಾರಿಸಲಾಯಿತು.

2. ವಾದಿಯು ನನಗೆ ಬರೆದುಕೊಟ್ಟ ಜಿಪಿಎ ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು, 9 ಆರ್ ಟಿ ಸಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ 10 ಎಂದು ಗುರುತಿಸಲಾಯಿತು. ಸಿಸಿ ನಂಃ 508/11 ರ ತೀರ್ಪಿನ ದೃಢೀಕೃತ ನಕಲು ಹಾಜರುಪಡಿಸಿದ್ದು, ಅದನ್ನು ನಿಪಿ-11 ಎಂದು, ದಿಃ 14-06-2001 ರ ವವಸ್ಥಾಪತ್ರದ ದೃಢೀಕೃತ ನಕಲು ಹಾಜರುಪಡಿಸಿದ್ದು, ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ